ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:18 ಸಂಪುಟ:4 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in

## ಬೆಳಕು

ಇಲ್ಲರೂ ಅರಸನಾಗಲು
ಸಾಧ್ಯವಿಲ್ಲ. ಅಗತ್ಯವೂ
ಇಲ್ಲ. ಹರಸಿ ಹಾರೈಸುವ
ಜನರ ಮಧ್ಯೆ ಬದುಕು
ಕಂಡುಕೊಂಡು
ನಮ್ಮದೇ ಸಾಮ್ರಾಜ್ಯ
ನಿರ್ಮಿಸಿಕೊಂಡು ಖುಷಿ
ಅನುಭವಿಸೋಣ.

–ಅನಾಮಿಕ

## Unbelievable facts.



'Taj Mahal' stay in Dark at Night & for 400 years. There are No Lights at TAJ. Once Government tried to put lights in Graden of taj but on first night all lights got broken. Same thing happened 2nd time. It is written, Mumtaz's soul Rests every night & Some Power Protects it. It is impossible to illuminate Taj.

## 'ನಗೆ ಹೊನಲು'




# ಗುರುವನ್ನು ನಿರಾಕರಿಸುವ ಸಂಸ್ಕೃತಿ ಒಳ್ಳೆಯದಲ್ಲ:ಎಸ್ಪಿ ರವಿ ಚೆನ್ನಣ್ಣವರ

ನಾನು ಈ ಮಟ್ಟಕ್ಕೆ ಬೆಳೆಯಬೇಕಾದರೆ ನನಗೆ ಕರ್ನಾಟಕ ಕಾಲೇಜಿನ ವಾತಾವರಣ , ಇಲ್ಲಿನ ಶಿಕ್ಷಕರ ಸಹಕಾರ, ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳು ಕಾರಣ ನನಗೆ ಬೆಳೆಯಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗೆ ಸಹಾಯಕವಾದವು ಎಂದು ಮೈಸೂರು ಎಸ್.ಪಿ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ರವಿ ಚನ್ನಣ್ಣನವರ್ ಅಭಿಪ್ರಾಯ
ಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಸೃಜನಾ ರಂಗಮಂದಿರದಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ ಆಯೋಜಿಸಿದ ಗುರವಂದನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತಾನಾಡಿದರು.

ಇಂದು ಜಗತ್ತು ಒಳ್ಳೆಯ ವ್ಯಕ್ತಿಗಳನ್ನು ಅಪೇಕ್ಷಿಸುತ್ತಿದೆ ಆದ್ದರಿಂದ ವಿದ್ಯಾರ್ಥಿಯಾದವನು ಜಗತ್ತಿಗೆ ತನ್ನನ್ನು ತಾನು ತೆರೆದುಕೂಂಡಾಗ ಮಾತ್ರ ಒಬ್ಬ ಒಳ್ಳೆಯ ನಾಯಕನಾಗಲು ಸಾಧ್ಯ.ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಅನೇಕ ಕಷ್ಟ ತೊಂದರೆಗಳ ಮಧ್ಯೆ ನಾನು ನನ್ನ ಧೃಡ ನಿರ್ಧಾರ ಮತ್ತು ಅಚಲ ಗುರಿಯೊಂದಿಗೆ ನನ್ನ ಕನಸ್ಸನ್ನು ಸಾಕಾರಗೊಳಿಸಲು ಸಾಧ್ಯವಾಯಿತು ಎಂದರು. ವಿದ್ಯಾರ್ಥಿಗಳು ಕೇವಲ ಪರೀಕ್ಷೆಗಾಗಿ ಓದದೇ, ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಅಧ್ಯಯನ ಮಾಡಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಅವರು ನಮ್ಮಲ್ಲಿ ಒಳ್ಳೆಯ ವ್ಯಕ್ತಿತ್ವ ಜ್ಞಾನ, ಚಿಂತನೆ, ಆಲೋಚನೆಗಳು ಮತ್ತು ಧೈರ್ಯವಿದ್ದರೆ ನಾವು ಜಗತ್ತನ್ನೆ ಗೆಲ್ಲಬಲ್ಲಿರಿ ಎಂದರು.

ನಿಮ್ಮ ಶಕ್ತಿಯನ್ನು ನೀವು ಗುರುತಿಸಿಕೊಂಡು, ನಿಮ್ಮ ನಿಲುವು, ಗುರಿ ಸ್ಪಷ್ಟತೆಯಿಂದ ಕೂಡಿದಾಗ ಮಾತ್ರ ನಾವು ಎನನ್ನಾದರೂ ಸಾಧಿಸಲು ಸಾಧ್ಯ, ಆದ್ದರಿಂದ ಪ್ರತಿಯೂಂದು ಘಳಿಗೆಯನ್ನು ಮತ್ತು ಸನ್ನಿವೇಶದಿಂದ ಕಲಿಯುವದು ಅಪಾರವಾದದ್ದು ಇದೆ ಎಂದ ಅವರು ಯಾರಿಗೆ ವಿಶಾಲ ಹೃದಯ, ಸರ್ವಜನರ ಹಿತವನ್ನು ಕಾಪಾಡುವವನು ಪ್ರತಿಯೊಬ್ಬರಲ್ಲಿ ನಿಮ್ಮನ್ನು ನೀವು ಕಂಡಾಗ ಮಾತ್ರ ಜಗತ್ತಿನಲ್ಲಿ ಶ್ರಿಮಂತ ಎಂದು ಭಾವನಾತ್ಮಕವಾಗಿ ನುಡಿದರು.

ಇಂದು ಎಲ್ಲ ಕಡೆಗೆ ವಿದ್ಯಾರ್ಥಿಗಳು ಜಾತಿಯ ಆಧಾರದ ಮೇಲೆ ಒಡೆದು ಹೋಗುತ್ತಿದ್ದು, ಇದು ಅಪಾಯಕಾರಿ ಬೆಳವಣಿಗೆ ಆದ್ದರಿಂದ ಇಂದು ಕುವೆಂಪು, ಅಂಬೇಡ್ಕರ್, ಭಗತಸಿಂಗ್, ಅವರಂತಹ ಮಾಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಓದಬೇಕು ಮತ್ತು ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದರು. ಹುಟ್ಟಿದ ಪ್ರತಿಯೊಂದು ಮಗವು ಜಗತ್ತನ್ನು ಆಳುವ ಶಕ್ತಿಯನ್ನು ಹೊಂದಿದ್ದು, ನಮ್ಮ ಧೃಡತೆ, ಕಠಿಣ ಪರಿಶ್ರಮ, ಸತತ ಅಧ್ಯಯನದಿಂದ ಜಗತ್ತನ್ನು ಗೆಲ್ಲಬಹುದು ಆದ್ದರಿಂದ ಯುವಕರು ಸಮಾಜದಲ್ಲಿ ಸಮಸ್ಯಾತ್ಮಕ ವ್ಯಕ್ತಿಗಳಾಗದೆ, ಸಮಾಜಕ್ಕೆ ಮಾದರಿ ವ್ಯಕ್ತಿಗಳಾಗಿ ರೂಪಗೊಳ್ಳಬೇಕು ಎಂದರು.



ಕರ್ನಾಟಕ ಕಾಲೇಜಿನ ಸೃಜನಾ ರಂಗಮಂದಿರದಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ ಗುರುವಂದನ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಎಸ್.ಪಿ. ರವಿ ಚೆನ್ನಣ್ಣವರ ಅವರನ್ನು ಕರ್ನಾಟಕ ಕಾಲೇಜಿನ ಪರವಾಗಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ಎಂ ಎಸ್ ತರ್ಲಗಟ್ಟಿ, ಡಾ ಸಿ.ಎಫ್ ಮೂಲಿಮನಿ ಮತ್ತು ಡಾ ಮಳಿಮಠ ಇದ್ದಾರೆ.

ಕಾರ್ಯಕ್ರಮದಲ್ಲಿ ಇನ್ನೂರ್ವ ಖ್ಯಾತ ಶಹನಾಯಿ ಕಲಾವಿದ ಕರ್ನಾಟಕ ಕಾಲೇಜಿನ ಹಳೆಯ ವಿದ್ಯಾರ್ಥಿ ರುದ್ರೇಶ ಭಜಂತ್ರಿ ಅವರು ವಿವಿಧ ತೆರನಾದ ಸ್ವರಗಳನ್ನು ಶಹನಾಯಿ ನುಡಿಸುವದರ ಮೂಲಕ ಶಿಕ್ಷಕ ದಿನಾಚರಣೆ ನಿಮಿತ್ಯ ಶಿಕ್ಷಕರಿಗೆ ಗೌರವ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಕಾಲೇಜಿನ ನಿವೃತ್ತಿ ಹೊಂದಿದ ಶಿಕ್ಷಕರನ್ನು ಹಾಲಿ ಶಿಕ್ಷಕ ವೃಂದ ಗೌರವಿಸಿ ಕಾಲೇಜಿನ ವಿದ್ಯಾರ್ಥಿಗಳು ಶಿಕ್ಷಕರ ದಿನಾಚರಣೆಯ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಆಗಮಿಸಿದ್ದರು. ಕರ್ನಾಟಕ ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಂ.ಎಸ್.ತರ್ಲಗಟ್ಟಿ ಸೇರಿದಂತೆ ಕರ್ನಾಟಕ ಕಾಲೇಜಿನ ಪ್ರಾಧ್ಯಾಪಕ ವೃಂದ ಮತ್ತು ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಪೂಜಾ ಕುಲಕರ್ಣಿ ಮತ್ತು ಸ್ವಾತಿ ಪಾಟೀಲ ನಿರ್ವಹಿಸಿದರು. ವಿವೇಕ ಪವಾರ್ ವಂದಿಸಿದರು.

# ಯೋಗ ಅಧ್ಯಯನದಿಂದ ಉಜ್ವಲ ಭವಿಷ್ಯ

ಇಂದು ಯೋಗ ಅಧ್ಯಯನವು ದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದು ಕೊಳ್ಳುತ್ತಿದ್ದು, ಯೋಗ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳು ಅಂತರಾಷ್ಟ್ರೀಯ ಮಟ್ಟದಲ್ಲಿವೆ ಎಂದು ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಅಯೋಜಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಅಂತರ ಕಾಲೇಜು ಏಕ ವಲಯ ಯೋಗಾಸ್ಪರ್ಧೆಯಲ್ಲಿ ಜಯ ಗಳಿಸಿದ ಯೋಗಪಟುಗಳಿಗೆ ಪ್ರಶಸ್ತಿ ನೀಡಿ ಮಾತನಾಡಿದರು.

ಇಂದು ಯೋಗ ಅಧ್ಯಯನ ಮಾಡುವವರಿಗೆ ಅನೇಕ ಸೌಲಭ್ಯಗಳಿದ್ದು, ಉನ್ನತ ಶಿಕ್ಷಣದಲ್ಲಿ ಕೂಡ ಈ ವಿಷಯದಲ್ಲಿ ಅಧ್ಯಯನ ಮಾಡಬಹುದು. ಆದ್ದರಿಂದ ಇತಿಹಾಸವನ್ನು ಪರಿಗಣಿಸಿದಾಗಿ ಮೂದಲಿನಿಂದಲು ಪೂರ್ವಜರು ಯೋಗ ಮತ್ತು ಧ್ಯಾನಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಇಂದು ಈ ಯೋಗವನ್ನು ಎಲ್ಲಡೆ ಅದರ ಕುರಿತು ಮತ್ತು ಮಹತ್ವವನ್ನು ಇಂದಿನ ಯುವ ಜನಾಂಗದ ಕೈಯಲ್ಲಿ ಇದೆ ಆದ್ದರಿಂದ ನಿಮ್ಮಗೆ ಮುಂದೆ ಉಜ್ವಲ ಭವಿಷ್ಯವಿದ್ದು, ಮುಂಬರುವ ಸ್ಪರ್ಧೆಗಳಲ್ಲಿ ವಿಜೇತರಾಗಿ ಎಂದು ಹಾರೈಸಿದರು.



ಈ ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಅಂತರ ಮಹಾವಿದ್ಯಾಲಯಗಳ ಏಕವಲಯ ಯೋಗಾಸನ ಸ್ಪರ್ಧೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಪುರುಷರ ವಿಭಾಗದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಪ್ರಥಮ ಸ್ಥಾನ ಪಡೆದುಕೊಂಡಿತು. ಯೋಗಪಟುಗಳು ಪ್ರಶಸ್ತಿಯನ್ನು ಡಾ ಸಿ.ಎಫ್. ಮೂಲಿಮನಿ ಮತ್ತು ಡಾ ರಾಜೇಶ್ವರಿ ಮಹೇಶ್ವರಯ್ಯ ಅವರಿಂದ ಸ್ವಿಕರಿಸುತ್ತಿರುವುದು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಯೋಗ ಇಂದು ಪ್ರತಿಯೊಬ್ಬರ ಆರೋಗ್ಯ ಮತ್ತು ಮಾನಸಿಕ ಸ್ಥಿತಿಗತಿಯನ್ನು ಸ್ಥಿರತೆಯಿಂದ ಕಾಪಾಡಿಕೂಳ್ಳಲು ಇಂದು ಮಹತ್ವ ಪಡೆದುಕೂಂಡಿದ್ದು, ಇಂದು ಯೋಗವನ್ನು ಎಲ್ಲ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಮೂಲಕ ನೀಡುತ್ತಿವೆ. ಆದ್ದರಿಂದ ಇಂತಹ ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಯೋಗ ಸ್ಪರ್ಧೆಗಳಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ ಎಂದರು. ಸ್ಪರ್ಧಾಳುಗಳು ನಾವು ಸೋಲಿರಲಿ ಗೆಲವು ಇರಲಿ ಎಲ್ಲವನ್ನು ಕ್ರೀಡಾ ಭಾವನೆಯಿಂದ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಅಂತರ ಮಹಾವಿದ್ಯಾಲಯಗಳ ಏಕವಲಯ ಯೋಗಾಸನ ಸ್ಪರ್ಧೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದರೆ, ಮಹಿಳೆಯರ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದು ಕೊಂಡಿತ್ತು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ಚಾಕಲಬ್ಬಿ, ಡಾ ವಿ ಜಗದೀಶ್, ಡಾ ರಜನಿ, ಕಾಲೇಜಿನ ದೈಹಿಕ ನಿರ್ದೇಶಕರಾದ ಡಾ ಮಂಜುನಾಥ ಅಸುಂಡಿ, ಡಾ ಚಂದ್ರು ಲಮಾಣಿ, ಡಾ. ಗೀತಾ ಘೋರ್ಪಡೆ, ಕಾಲೇಜಿನ ಕ್ರೀಡಾ ಕಾರ್ಯದರ್ಶಿ ರಿಯಾಜ್ ಮತ್ತು ವಿವಿಧ ಕಾಲೇಜುಗಳಿಂದ ಆಗಮಿಸಿದ ದೈಹಿಕ ನಿರ್ದೇಶಕರು ಯೋಗಪಟುಗಳು ಭಾಗವಹಿಸಿದ್ದರು.

# ಉತ್ತರ ಕರ್ನಾಟಕಕ್ಕೆ ಧಾರವಾಡವು ಶಿಕ್ಷಣ ಕಾಶಿ: ನಾಡೋಜ ಡಾ ಎಂ ಚಿದಾನಂದಮೂರ್ತಿ

ಉತ್ತರ ಕರ್ನಾಟಕದ ಜನರ ಶಿಕ್ಷಣ ಪೂರೈಸಲು ಕರ್ನಾಟಕ ಕಲಾ ಮಹಾವಿದ್ಯಾಲಯ ಸ್ಥಾಪನೆ ಯಾಗಿದ್ದು, ಇದೊಂದು ದೇಶದಲ್ಲಿ ಐತಿಹಾಸಿಕ ಶಿಕ್ಷಣ ಕೇಂದ್ರವಾಗಿದೆ ಎಂದು ಹಿರಿಯ ಸಂಶೋಧಕ ನಾಡೋಜ ಡಾ ಎಂ ಚಿದಾನಂದಮೂರ್ತಿ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಸಭಾಂಗಣದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಕರ್ನಾಟಕ ಸಂಘವು ಏರ್ಪಡಿಸಿದ್ದ ಶತಮಾನೋತ್ಸವದ ಶುಭ ಹಾರೈಕೆ ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ದಕ್ಷಿಣ ಕರ್ನಾಟಕಕ್ಕೆ ಮೈಸೂರು ವಿದ್ಯಾ ಕೇಂದ್ರವಾದರೆ ಉತ್ತರ ಕರ್ನಾಟಕಕ್ಕೆ ಧಾರವಾಡ ಶಿಕ್ಷಣ ಕಾಶಿ ಆಗಿದೆ ಆದ್ದರಿಂದ ಕಾಲೇಜು ಶತಮಾನೋತ್ಸವದ ಆಚರಿಸುವ ಕಾಲದಲ್ಲಿ ನಾನು ಇಲ್ಲಿಗೆ ಬಂದಿದ್ದು ಒಂದು ಸಂತೋಷಕರ ವಿಷಯ ಎಂದ ಹರ್ಷವ್ಯಕ್ತಪಡಿಸಿದ ಅವರು ವಿಕ್ರಮಾಧಿತ್ಯನು ತನ್ನ ಸಾಮ್ರಾಜ್ಯವನ್ನು ನೇಪಾಳದ ವರೆಗೆ ವಿಸ್ತರಿಸದ್ದು, ಅಲ್ಲಿ ಈಗಲೂ ಕರ್ನಾಟಕ ಜಂಗಮ ಎನ್ನುವ ಸಮುದಾಯ ಇದ್ದು, ಅಲ್ಲಿ ಕರ್ನಾಟಕದ ಸಂಪ್ರದಾಯದ ಅನೇಕ ಕುರಹುಗಳಿವೆ ವಿದ್ಯಾರ್ಥಿಗಳಾದವರೆ ಒಮ್ಮೆಯಾದರು ಅಲ್ಲಿ ಬೇಟಿ ನೀಡಿ ಎಂದ ಅವರು 12 ಶತಮಾನದಲ್ಲಿ ಬಸವಣ್ಣನ ಕಾಲದಲ್ಲಿ ಕ್ರಾಂತಿಯಾಗಿದ್ದು, ಕೆಳ ಹಂತದ ಜನಸಮುದಾಯಕ್ಕೆ ಸಮಾನತೆಯನ್ನು ನೀಡಲು ಈ ಕ್ರಾಂತಿಯಾಯಿತು.ಅಲ್ಲಿ ಎಲ್ಲ ಜಾತಿಯ ಪುರುಷ ಮತ್ತು ಸ್ತ್ರೀಯರನ್ನು ಒಳಗೊಂಡಂತೆ ದೇವದಾಸಿಯರು ಕೂಡ ಆ ಕ್ರಾಂತಿಯಲ್ಲಿ ಇದ್ದರು ಆದ್ದರಿಂದ ಇತಿಹಾಸ ನಮಗೆ ಬಹಳಷ್ಟು ಕಲಿಸುತ್ತದೆ. ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಇತಿಹಾಸವನ್ನು ಅರಿಯಬೇಕು ಎಂದರು. ಹಂಪಿಗೆ ಬೆಟಿ ನೀಡಿ ಎಲ್ಲ ರೀತಿಯಿಂದಲು ಸಾಕಷ್ಟು ಐತಿಹಾಸಿಕ ಮಾಹಿತಿಯನ್ನು ಹಂಪಿಯು ಒದಗಿಸುತ್ತದೆ. ಆದ್ದರಿಂದ ಜಗತ್ತಿನ ಯಾವ ದೇಶದಲ್ಲಿ ಸಿಗದ ಅಪರೂಪದ ಕಲಾ ವೈಶಿಷ್ಟ್ಯತೆಯನ್ನು ಹಂಪಿ ಹೊಂದಿದೆ ಎಂದರು. ಬೆಂಗಳೂರು ನನಗೆ ಲಕ್ಷ್ಮಿಪುರ ಇದ್ದಂತೆ ಧಾರವಾಡ ಶಾರದೆಪುರ ಇದ್ದಂತೆ ಎಂದು ಧಾರವಾಡವನ್ನು ವರ್ಣಿಸಿದ ಅವರು ಈ ಕಾಲೇಜಿನಲ್ಲಿ ಪ್ರವೇಶ ಪಡೆದ ನೀವು ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಕೊಡುಗೆ ನೀಡಬೇಕು ಮತ್ತು ಕಾಲೇಜಿಗೆ ಕೀರ್ತಿ ತರಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ ಡಿ.ಬಿ.ಕರಡೋಣಿ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷರಾದ ಡಾ ಶರಣು ಮುಷ್ಠಿಗೇರಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.




**ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಕರ್ನಾಟಕ ಸಂಘವು ಏರ್ಪಡಿಸಿದ್ದ 'ಶತಮಾನೋತ್ಸವದ ಶುಭ ಹಾರೈಕೆ' ಎಂಬ ಕಾರ್ಯಕ್ರಮದಲ್ಲಿ ನಾಡೋಜ ಹಿರಿಯ ಸಂಶೋಧಕ ಡಾ ಎಂ ಚಿದಾನಂದಮೂರ್ತಿ ಅವರನ್ನು ಕಾಲೇಜಿನ ಪರವಾಗಿ ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ವಾಮದೇವ ತಳವಾರ, ಡಾ ಬಿ.ಎಸ್ ಭಜಂತ್ರಿ, ಡಾ ಡಿ.ಬಿ ಕರಡೋಣಿ ಡಾ ಶರಣು ಮುಷ್ಠಿಗೇರಿ ಸೂಮು ದೂಡಮನಿ ಡಾ ಆನಂದ, ಇತರ ಪ್ರಾಧ್ಯಾಪಕ ವೃಂದವನ್ನು ಕಾಣಬಹುದು.**

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಘದ ಸಂಯೋಜಕರಾದ ಡಾ ವಾಮದೇವ ತಳವಾರ, ಪ್ರಾಧ್ಯಾಪಕರಾದ ಡಾ. ಎಮ್ ಆರ್ ಹಿರೇಮಠ, ಡಾ ಬಿ.ಎಸ್.ಭಜಂತ್ರಿ. ಡಾ .ಸುರೇಶ ಹುಲ್ಲನ್ನವರ, ಡಾ ಮಹೇಶ ಪಾಟೀಲ್, ಡಾ ಮಂಜುನಾಥ ಅಸುಂಡಿ , ಡಾ ವಿ.ಪಿ ಸುಣಗಾರ. ಡಾ ಸೋಮು ದೂಡಮನಿ, ಡಾ ಬಸವರಾಜ ನಾಗಮ್ಮನವರ ಪ್ರಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# 'ಆರೋಗ್ಯಕರ ಜೀವನಕ್ಕೆ ಯೋಗ ತಳಹದಿ'

ಯೋಗ ಆರೋಗ್ಯಕರ ಉತ್ತಮ ಜೀವನದ ತಳಹದಿಯಾಗಿದೆ ಎಂದು ಕವಿವಿಯ ಸಂಸ್ಕೃತ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ, ಡಾ ಸಿ.ಎಸ್.ನಾಯ್ಕರ್ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಬಿ.ಎ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಅಂತರ್ ಮಹಾವಿದ್ಯಾಲಯಗಳ, ಏಕವಲಯದ ಯೋಗಾಸನ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಆಧುನಿಕತೆಯ ಜೀವನದಲ್ಲಿ ಜನರು ಆರೋಗ್ಯಕ್ಕೆ ಗಮನ ನೀಡದೆ ಅದುಕೆಟ್ಟ ಅವಿರತ ಶ್ರಮದಿಂದ ಆರೋಗ್ಯ ಸರಿಪಡಿಸುವಲ್ಲಿ ಅನಗತ್ಯವಾಗಿ ಹಣ ಖರ್ಚು ಮಾಡುತ್ತಾರೆ.

ಆದ್ದರಿಂದ ಇಂದಿನ ದಿನಮಾನಗಳಲ್ಲಿ ಯೋಗಾಭ್ಯಾಸ ಎಲ್ಲರಿಗೂ ಅವಶ್ಯಕವಾಗಿದೆ ಎಂದರು. ಸಧೃಡ ಆರೋಗ್ಯದಿಂದ, ಸಧೃಡ ಮನಸ್ಸು ಹೊಂದುವುದರಿಂದ ಅಧ್ಯಯನಕ್ಕೆ ನೆರವಾಗಲಿದ್ದು, ಯಶಸ್ಸಿಗೆ ಕಾರಣ ಕೂಡ ಆಗುವುದೆಂದು ಅಭಿಪ್ರಾಯಪಟ್ಟರು. ಜಗತ್ತಿನಲ್ಲಿ ಜೂನ್ 21 ರಂದು ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದ್ದು, ಇದು ಕೇವಲ ಆಚರಣೆಗೆ ಮಾತ್ರ ಸೀಮಿತವಾಗದೆ ಎಲ್ಲರು ಯೋಗಾಭ್ಯಾಸವನ್ನು ಮೈಗೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಉತ್ತಮ ಆರೋಗ್ಯಕರ ಜೀವನಕ್ಕೆ , ಯೋಗಕ್ಕಿಂತ ಸುಲಭವಾದ ಬೇರೆ ಯಾವ ಮಾರ್ಗವಿಲ್ಲ ಎಂದು ನುಡಿದ ಅವರು ಯೋಗವು ಇಂದು ಎಲ್ಲರು ಸುಲಭವಾಗಿ ಮಾಡಬಹುದಾದ ಒಂದು ಪ್ರಕ್ರಿಯೆಯಾಗಿದೆ ಎಂದರು.

ಸಮಾರಂಭದಲ್ಲಿ ಕರ್ನಾಟಕ ಕಾಲೇಜಿನ ಜಿಮಖಾನದ ಉಪಾಧ್ಯಕ್ಷರಾದ ಡಾ.ಬಿ.ಎಫ್. ಚಾಕಲಬ್ಬಿಯವರು ಮಾತನಾಡಿ ಸ್ಪರ್ಧಾಳುಗಳಿಗೆ ಬೇಕಾದಂತಹ ಎಲ್ಲ ಸೌಲಭ್ಯಗಳನ್ನು ಕಾಲೇಜಿನ ವತಿಯಿಂದ ಒದಗಿಸಲಾಗುವುದು ಎಂದರು.

ಕಾರ್ಯಕ್ರಮದ ಅಧ್ಯಕತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯನವರು ಮಾತನಾಡಿ ಜೀವನದಲ್ಲಿ ಯೋಗ ಅಳವಡಿಸಿಕೊಂಡರೆ ಜೀವನವೇ ಒಂದು ಸುಯೋಗವಾಗಲಿದೆ ಎಂದರು. ಯೋಗವು ವ್ಯಕ್ತಿಯ ಉನ್ನತಿಗೆ ಸಹಾಯಕವಾಗಲಿದ್ದು, ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ ಎಂದರು. ಜೀವನದಲ್ಲಿ ಗುರಿ ಎಷ್ಟು ಮುಖ್ಯವೋ, ಅಷ್ಟೇ ಅದರ ಮಾರ್ಗವು ಮುಖ್ಯ. ಕೆಟ್ಟ ಮಾರ್ಗವು ಕೆಟ್ಟ ಭವಿಷ್ಯಕ್ಕೆ ಸೂಚನೆಯಾಗಿದ್ದು, ನಮ್ಮಲ್ಲಿರುವ ಒಳ್ಳೆಯ ಮೌಲ್ಯಗಳು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತವೆ. ಸ್ಪರ್ಧೆಗಳು ಕ್ರೀಡಾಸ್ಪೂರ್ತಿಯಾಗಿ ತೆಗೆದುಕೊಳ್ಳಬೇಕೆಂದರು.

ಈ ಅಂತರ ಮಹಾವಿದ್ಯಾಲಯಗಳ ಯೋಗ ಸ್ಪರ್ಧೆಯಲ್ಲಿ ಕವಿವಿಯ ವ್ಯಾಪ್ತಿಯ ನಾಲ್ಕು ಜಿಲ್ಲೆಗಳ 20 ಕಾಲೇಜುಗಳ 74 ಯೋಗಪಟುಗಳು ಮಹಿಳಾ ಮತ್ತು ಪುರುಷ ವಿಭಾಗದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ. ರಜನಿ.ಎಚ್ ಅತಿಥಿಗಳನ್ನು ಪರಿಚಯಿಸಿದರೆ, ಡಾ. ಮಂಜುನಾಥ್ ಅಸುಂಡಿ ಸ್ವಾಗತಿಸಿದರು. ಡಾ. ಗೀತಾ ಘೋರ್ಪಡೆ ಪ್ರಾರ್ಥಿಸಿದರು. ಕಾರ್ಯಕ್ರಮವನ್ನು ಡಾ. ಚಂದ್ರು ಲಮಾಣಿಯವರು ನಿರೂಪಿಸಿದರು.



**ಸಂಸ್ಕೃತ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ, ಡಾ ಸಿ.ಎಸ್.ನಾಯ್ಕರ್ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಬಿ.ಎ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಅಂತರ್ ಮಹಾವಿದ್ಯಾಲಯಗಳ, ಏಕವಲಯದ ಯೋಗಾಸನ ಸ್ಪರ್ಧೆಯನ್ನು ದೀಪ ಬೆಳಗಿಸುವದದರ ಮೂಲಕ ಉದ್ಘಾಟಿಸುತ್ತಿರುವದು. ಚಿತ್ರದಲ್ಲಿ ಡಾ ಮಂಜುನಾಥ ಅಸುಂಡಿ, ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಬಿ.ಎಫ್. ಚಾಕಲಬ್ಬಿ, ಡಾ ಚಂದ್ರು ಲಮಾಣಿ ಡಾ ವಿ ಜಗದೀಶ್ ಇದ್ದಾರೆ.**

# ದುಷ್ಟ ಹವ್ಯಾಸಗಳಿಂದ ಆಕರ್ಷಿತರಾಗಿ ಜೀವನ ಹಾಳು




**ಕರ್ನಾಟಕ ಕಾಲೇಜಿನಲ್ಲಿ ನಡೆದ ರೆಡ್‌ಕ್ರಾಸ್ ಕಾರ್ಯಕ್ರಮವನ್ನು ನಿವೃತ್ತ ವೈದ್ಯರಾದ ಡಾ ಡಿ.ಬಿ.ಕರಪೂರಮಠ ಉದ್ಘಾಟಿಸಿದರು.**

ನಾವು ಸೇವಿಸುವ ಆಹಾರದ ಅನುಗುಣವಾಗಿ ನಮ್ಮ ದೇಹದ ಬೆಳವಣಿಗೆ ಜೊತೆಗೆ ಬೌದ್ಧಿಕ ಬೆಳವಣಿಗ ಆಗುತ್ತದೆ ಎಂದು ನಗರದ ಖ್ಯಾತ ನಿವೃತ್ತ ವೈದ್ಯರಾದ ಡಾ ಡಿ.ಬಿ.ಕರಪೂರಮಠ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಫ್ಯಾರನ್ ಸಭಾಂಗಣದಲ್ಲಿ ಕಾಲೇಜಿನ ರೆಡ್‌ಕ್ರಾಸ್ ಘಟಕವು ಆಯೋಜಿಸಿದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಮಾಧ್ಯಮಗಳ ಪ್ರಭಾವದಿಂದ ಅವರು ಅನೇಕ ದುಷ್ಟ ಹವ್ಯಾಸಗಳಿಗೆ ಆಕರ್ಷಿತರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವ ಅನೇಕ ನಿದರ್ಶನಗಳನ್ನು ನಾವು ನೋಡುತ್ತಿದ್ದೆವೆ .ಆದ್ದರಿಂದ ಇಂದಿನ ಯುವಕರು ಮತ್ತು ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ರೂಢಿಸಿಕೂಂಡು ತಮ್ಮ ಗುರಿಯತ್ತ ಸಾಗಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಾಲೇಜಿನ ರೆಡ್‌ಕ್ರಾಸನ ಮುಖ್ಯ ಸಂಂ-ಯೋಜನಾಧಿಕಾರಿ ಡಾ ಸ್ಟೆಲ್ಲಾ ಸ್ಟಿವನ್ ಮಾತನಾಡಿ ಕಾಲೇಜಿಗೆ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಅವರು ರೆಡ್‌ಕ್ರಾಸ ಘಟಕದ ಸದಸ್ಯರಾಗಿದ್ದಾರೆ ಎಂದ ಅವರು ರೆಡ್‌ಕ್ರಾಸ ಕುರಿತ ಅದರ ಅದರ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿ ಅತಿಥಿಗಳನ್ನು ಸ್ವಾಗತಿಸಿದರು. ರೆಡ್‌ಕ್ರಾಸನ ಇನ್ನೂರ್ವ ಅಧಿಕಾರಿ ಡಾ ವಾಮದೇವ ತಳವಾರ ಅವರು ರೆಡ್‌ಕ್ರಾಸಿನ ಉಗಮದ ಕುರಿತು ಪರಿಚಯ ಮಾಡಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು. ಇದೇ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ರೆಡ್‌ಕ್ರಾಸ್‌ನ ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಡಾ ವಿಭಾ ಕುಲಕರ್ಣಿ, ಡಾ ಅನ್ನಪೂರ್ಣ, ಡಾ ವಾಯ್ ಎಸ್ ರಾವುತ್ ಕಾಲೇಜಿನ ರೆಡ್ ಕ್ರಾಸ್‌ದ ವಿದ್ಯಾರ್ಥಿ ಕಾರ್ಯದರ್ಶಿಗಳು ಹಾಜರಿದ್ದರು.

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. **ಪುಟ ವಿನ್ಯಾಸ: ಶ್ರೀಹರಿ.**